**ಮೂ.ದಾ.ನಂ. 12/2021**

ಪಿ.ಡಬ್ಲ್ಯು2

(ಇಂದು ದಿನಾಂಕ: **14-07-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀಮತಿ.ವಿ.ಬಿ.ಜಿ. ವಕೀಲರಿಂದಃ**

ನಾನು ಈ ದಾವೆಯ ಮೊದಲನೇಯ ವಾದಿಯ ಎಂದರೆ ಸರಿ. 2ನೇ ವಾದಿಯವರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿದ್ದರು ಎಂದರೆ ಸರಿ. ತದನಂತರ ಅವರಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರಾಗಲು ಆಗಲಿಲ್ಲ ಎಂದರೆ ಸರಿ. ಸದ್ರಿಯವರು ಅಪಘಾತಕ್ಕೊಳಗಾದ ಕಾರಣ ಮಾನ್ಯ ನ್ಯಾಯಾಲಯದ ಮುಂದೆ ಹಾಜರ ಆಗಲು ಸಾಧ್ಯವಾಗಲಿಲ್ಲ. ತದನಂತರದಲ್ಲಿ ಮಧ್ಯಂತರ ಅರ್ಜಿ ಹಾಕಿದ ಆಧಾರದ ಮೇಲೆ ದಿಃ 12/08/2025 ರಂದು ನ್ಯಾಯಾಲಯದ ಅದೇಶದ ಮೇರೆಗೆ ಅವರ ಸಾಕ್ಷ್ಯವನ್ನು discard ಆಗಿದ್ದು ಇರುತ್ತದೆ ಎಂದರೆ ಸರಿ. ಆ ಕಾರಣ ನಾನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಾಗಿ ಸಾಕ್ಷ್ಯವನ್ನು ನುಡಿಯಲು ಬಂದಿರುತ್ತೇನೆ. ನಾನು ನನ್ನ ಪರವಾಗಿ ಅಲ್ಲದೇ ವಾದಿಯರೆಲ್ಲರ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿಯರೆಲ್ಲರ ಪರವಾಗಿ ಅಂದರೆ 5 ವಾದಿಯರ ಪರವಾಗಿ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ಆ ಪೈಕಿ 5 ಜನ ವಾದಿಯರ ಹೆಸರು ವೆಂಕಟೇಶ ಕಾಮೇಶ್ವರ ನಾಯ್ಕು, ಪಾಂಡುರಂಗ ಕಾಮೇಶ್ವರ ನಾಯ್ಕು, ಜಾನು ಕಾಮೇಶ್ವರ ನಾಯ್ಕು, ದಯಾನಂದ ಕಾಮೇಶ್ವರ ನಾಯ್ಕು, ಶಾರದಾ ಚಿದಂಬರ ನಾಯ್ಕು ಇರುತ್ತಾರೆ. ಸದ್ರಿ ದಾವೆಯಲ್ಲಿ ನಾವು 10ಜನ ವಾದಿಯರು ಹಾಗೂ 6 ಜನ ಪ್ರತಿವಾದಿಯರು ಇರುತ್ತಾರೆ. ಈ ದಾವೆ ಸಲ್ಲಿಸುವ ಕಾಲಕ್ಕೆ ವಕೀಲರಿಗೆ 2ನೇ ವಾದಿಯರು ಮಾಹಿತಿಯನ್ನು ನೀಡಿರುತ್ತಾರೆ. ಸದ್ರಿ ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು 2ನೇ ವಾದಿಯರು ವಕೀಲರಿಗೆ ಪೂರೈಸಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ

**ಮೂ.ದಾ.ನಂ. 12/2021**

ಪಿ.ಡಬ್ಲ್ಯು2

ಪ್ರಮಾಣ ಪತ್ರಕ್ಕೆ ನನಗೆ ಗೊತ್ತಿರುವಷ್ಟು ನಾನು ಮಾಹಿತಿಯನ್ನು ನೀಡಿದ್ದು ಇರುತ್ತದೆ. ಸದ್ರಿ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮತ್ತೆ ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಹೇಗೆ ಹೇಳಲು ಸಾಧ್ಯ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ ಗುರುತಿಸಿದ ನಿಶಾನೆ ದಾಖಲಾತಿಗಳ ಬಗ್ಗೆ ನಾನು ಮಾಹಿತಿಯನ್ನು ಹೊಂದಿರುತ್ತೇನೆ.

1 ರಿಂದ 10ನೇ ವಾದಿಯರು ಒಂದೇ ಕುಟುಂಬದ ಸದಸ್ಯರು ಎಂದರೆ ಸಾಕ್ಷಿಯು 10ನೇ ವಾದಿಯನ್ನು ಹೊರತುಪಡಿಸಿ ಉಳಿದ ಎಲ್ಲ ವಾದಿಯರು ಒಂದೇ ಕುಟುಂಬದ ಸದಸ್ಯರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. ಪಿತ್ರಾರ್ಜಿತ ಆಸ್ತಿ ಅಂದರೆ ನಮ್ಮ ಮೂಲ ಪುರುಷನು ಯಾರು ಎಂದರೆ ಸಾಕ್ಷಿಯು ನನಗೆ ಹಿಂದಿನ ತಲೆಮಾರುಗಳ ಕುರಿತು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

8 ಹಾಗೂ 9ನೇ ವಾದಿಯರ ತಂದೆ ಜಟ್ಟಿ ನಾಯ್ಕು ಹಾಗೂ 1 ರಿಂದ 5ನೇ ವಾದಿಯರ ತಂದೆ ಕಾಮೇಶ್ವರ ನಾಯ್ಕು ಇವರಿಬ್ಬರ ತಂದೆ ಇವರಿಬ್ಬರು ಅಣ್ಣ ತಮ್ಮಂದಿರು. 6ನೇ ವಾದಿಯವರು ನನ್ನ ಸ್ವಂತ ತಂಗಿ ಆಗಿರುತ್ತಾರೆ. 7ನೇ ವಾದಿಯವರು ಯಾವ ರೀತಿಯ ನಮ್ಮ ಕುಟುಂಬದ ಸದಸ್ಯರು ಎಂದರೆ ಸಾಕ್ಷಿಯು ದೊಡ್ಡಪ್ಪ ಹಾಗೂ ಚಿಕ್ಕಪ್ಪನ ಮಕ್ಕಳು ಆಗಿರುತ್ತಾರೆ ಎಂದು ನುಡಿಯುತ್ತಾರೆ.

ಮಹಾದೇವ ಕೇಶ ನಾಯ್ಕು ಇವರ ಪರಿಚಯ ನನಗೆ ಇತ್ತು ಎಂದರೆ ಸರಿ. ಪಾರ್ವತಿ ಮಹಾದೇವ ನಾಯ್ಕು ಇವರು ಮಹಾದೇವ ಕೇಶ ನಾಯ್ಕು ಇವರ ಪತ್ನಿ ಆಗಿರುತ್ತಾರೆ ಎಂದರೆ ಸರಿ. ಮಹಾದೇವ ಕೇಶ ನಾಯ್ಕು ಇವರು ದತ್ತಕಕ್ಕೆ ಹೋದ ವ್ಯಕ್ತಿ ಎಂದರೆ ಸರಿ. ಅವರ ದತ್ತಕ ತಂದೆ ಬೀರಪ್ಪಾ ನಾಯ್ಕು ಎಂದರೆ ಸರಿ. ಶಿವಮ್ಮಾ ಕೋಂ ಬೀರಪ್ಪಾ ನಾಯ್ಕು ಇವರ ಪರಿಚಯ ನನಗೆ ಚಿಕ್ಕ ವಯಸ್ಸಿನಿಂದಲೂ ಸಹ ಇರುತ್ತದೆ.

**ಮೂ.ದಾ.ನಂ. 12/2021**

ಪಿ.ಡಬ್ಲ್ಯು.2

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಸದ್ರಿ ದಾಖಲಾತಿಯು ಭೋಗಸ್ಸ ದಾಖಲೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ತೋರಿಸಿದಂತಹ ದಾಖಲಾತಿಯು ನಿಪಿ1 ದಾಖಲಾತಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ1 ಭೋಗಸ್ಸ ದಾಖಲಾತಿಯ ಆಧಾರದ ಮೇರೆಗೆ ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ಯಾವ ದಾಖಲಾತಿಯ ಮೇರೆಗೆ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿಯು ನಿಪಿ1 ನ್ನು ನೋಡಿ ನಿಪಿ1 ದಾಖಲಾತಿಯ ಆಧಾರದ ಮೇರೆಗೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಮಹಾದೇವ ಕೇಶವ ನಾಯ್ಕ ಇವರು ಸಲ್ಲಿಸಿದ ಅರ್ಜಿ ಎಂದರೆ ಸಾಕ್ಷಿಯು ಅದು ಭೋಗಸ್ಸ ಅರ್ಜಿ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ